ಕ್ರಸಂ	ಪೊಲೀಸ್ ಠಾಣೆ, ಮೊಕದ್ದಮೆ ಸಂಖ್ಯೆ ಮತ್ತು ಕಲಂ	ಆಪಾದಿತರ ಹೆಸರು ಪದನಾಮ ಮತ್ತು ವಿಳಾಸ	ದಾಖಲಾದ ದಿನಾಂಕ
83	ಗೋಕಾಕ್ ಶಹರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ : 141/05 ಕಲಂ 196, 198, 420 ಐಪಿಸಿ	ಶ್ರೀ ವಿಶ್ವನಾಥ ಮಹದೇವಪ್ಪ ಭೋವಿ, ಕೌಜಲಗಿ ತಾಲ್ಲೂಕು ಬೆಳಗಾಂ ಜಿಲ್ಲೆ	20-08-2005
84	ಹಲಸೂರು ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ : 380/06 ಕಲಂ 196, 198, 420 ಐಪಿಸಿ	ಶ್ರೀ ಕೆ.ಎಂ. ರಾಜಣ್ಣ, ಪಿಸಿ, ಕೆ.ಎಸ್.ಆರ್.ಪಿ, ಬೆಂಗಳೂರು	17-10-2006

2080 (2531) ಶ್ರೀ ಬಾಲರಾಜ್.ಎಸ್ (ಕೊಳ್ಳೇಗಾಲ) :- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ತಾಲ್ಲೂಕು ಕೊಳ್ಳೇಗಾಲ ಮತ್ಕ್ಷೇತ್ರದಲ್ಲಿ ಸರ್ಕಾರಿ ನರ್ಸಿಂಗ್ ಕಾಲೇಜ್ ತೆರೆಯಲು ಸರ್ಕಾರಕ್ಕಿರುವ ತೊಂದರೆಗಳೇನು;

ಆ) ಈಗಾಗಲೇ ಖಾಸಗಿ ನರ್ಸಿಂಗ್ ಶಾಲೆ ಇರುವುದರಿಂದ ಸರ್ಕಾರಿ ನರ್ಸಿಂಗ್ ಕಾಲೇಜು ತೆರೆಯುವುದು ಸೂಕ್ತವಲ್ಲವೇ;

ಇ) ಹಾಗಿದ್ದಲ್ಲಿ ಪ್ರಸಕ್ತ ಸಾಲಿನಲ್ಲಿ ನರ್ಸಿಂಗ್ ಕಾಲೇಜು ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :

ಅ, ಆ, ಇ) ಒಂದು ನರ್ಸಿಂಗ್ ಶಾಲೆ ಅಥವಾ ನರ್ಸಿಂಗ್ ಕಾಲೇಜ್‌ನ್ನು ತೆರೆಯುವ ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುವುದು.

2081 (2530) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) :- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ಅಗತ್ಯ ವೈದ್ಯಕೀಯ ಸೇವೆಗಳಡಿಯಲ್ಲಿ ಬರುವ ಸುಮಾರು 17 ವರ್ಷ ಸೇವೆ ಸಲ್ಲಿಸಿರುವ ವೈದ್ಯಾಧಿಕಾರಿಗಳು, ಪರಿಶಿಷ್ಟ ಜಾತಿಗೆ ಸೇರಿದ ವೈದ್ಯರನ್ನು ಅಲ್ಲದೇ ಸೇವಾ ಹಿರತನವನ್ನು ಕಡೆಗಣಿಸಿ ಒಂದು ವರ್ಷ ಸೇವೆ ಸಲ್ಲಿಸಿರುವ ಹಾಗೂ ಪಿ.ಜಿ.ಹಾಸ್ಟೆಲ್‌ನಲ್ಲಿ ವಾಸವಾಗಿರುವ ಅವಿವಾಹಿತ ಹೊರ ರಾಜ್ಯದ ವೈದ್ಯರೊಬ್ಬರಿಗೆ ವಸತಿ ಗೃಹವನ್ನು ಹಂಚಿಕೆ ಮಾಡಿರುವುದಕ್ಕೆ ಕಾರಣಗಳೇನು;